ನಗರದಲ್ಲಿರುವ ಬಲ್ಕ್ ವೆಂಡಿಂಗ್ ಬೂತ್‌ಗಳ ಬಗ್ಗೆ

೨೧೨೩. ಶ್ರೀ ಗೋಪಾಲ ಮುಂಕಂದ ಕಾನಡೆ (ಸಿರ್ಸಿ).—ಮಾನ್ಯ ರೇಷ್ಮೆ, ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಲ್ಲಿರುವ ಒಟ್ಟು ಬಲ್ಕ್ ವೆಂಡಿಂಗ್ ಬೂತುಗಳ ಸಂಖ್ಯೆ ಎಷ್ಟು ?
ಆ ಬೂತುಗಳಲ್ಲಿ ದಿನವೊಂದಕ್ಕೆ ಎಷ್ಟು ಲೀಟರುಗಳಷ್ಟು ಹಾಲು ಮಾರಾಟವಾಗುತ್ತಿದೆ ?

ಇ) ಆದರ ನಿರ್ವಹಣೆಗೆ ಸರ್ಕಾರದವರಿಗೆ ತಿಂಗಳೊಂದಕ್ಕೆ ಎಷ್ಟು ವೆಚ್ಚವಾಗುತ್ತಿದೆ ?
ನೀರು, ವಿದ್ಯುಚ್ಚಕ್ತಿಗಳ ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು).

ಇ) ಸದರಿ ಬೂತುಗಳಿಂದ ಡೈರಿಗೆ ತಿಂಗಳೊಂದಕ್ಕೆ ಬರುತ್ತಿರುವ ಆದಾಯ ಎಷ್ಟು?

ಈ) ಸದರಿ ಭೂತುಗಳ ಕನ್ಸಷನರುಗಳಿಗೆ ಈಗ ಕೊಡುತ್ತಿರುವ ಕಮಿಷನ್ ದರವು ಬಹಳ ಕಡಿಮೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಇದನ್ನು ಹೆಚ್ಚು ಮಾಡಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೆ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ೧೨೧ ಭೂತಂಗಳು
ದಿನವಹಿ ಸರಾಸರಿ ೪೮,೦೨೦ ಲೀಟರುಗಳು.

ಆ) ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳಿಗೆ ತಿಂಗಳೊಂದಕ್ಕೆ ಪ್ರತಿ ಬೂತಿಗೆ ಸರಾಸರಿ ರೂ. ೩೦೪೧–೮೦ ವೆಚ್ಚವಾಗುತ್ತಿದೆ.

ವಿವರಗಳು ಪ್ರತಿ ಭೂತಿಗೆ ತಿಂಗಳೊಂದಕ್ಕೆ :

		ರೂ. ಪೈ.
ನೀರು	—	೨೧–೮೦
ವಿದ್ಯುಚ್ಚಕ್ತಿ	—	೧೧೦೦–೨೦
ಉಸ್ತುವಾರಿ ಹಾಗೂ ಇತರೆ ವೆಚ್ಚಗಳು :		೧೯೨೦–೦೦
	ಒಟ್ಟು	೩೦೪೧–೮೦

ಇ) ಯಾವುದೇ ಲಾಭ ಸಧ್ಯಕ್ಕೆ ಬರುತ್ತಿಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಮೈಸೂರು ಲ್ಯಾಂಪ್‌ವರ್ಕ್ಸ್ ಲಿಮಿಟೆಡ್‌ನ ಬಗ್ಗೆ

೧೭೮೧. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುಚ್ಚಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಲ್ಯಾಂಪ್ಸ್ ಲಿಮಿಟೆಡ್ ಸಂಸ್ಥೆಯು ವಿವಿಧ ರೂಪದಲ್ಲಿ ಹಣಕಾಸು ಸಂಸ್ಥೆಗಳಿಗೆ ಖಾಸಗಿ ವ್ಯಕ್ತಿಯ ಸಂಸ್ಥೆಗಳಿಗೆ ನೀಡಬೇಕಾಗಿರುವ ಬಾಕಿಯ ಮೊತ್ತ ಎಷ್ಟು ?

ಆ) ಮೈಸೂರು ಲ್ಯಾಂಪ್ಸ್ ಲಿಮಿಟೆಡ್ ಕಳೆದ ಮೂರು ವರ್ಷಗಳಲ್ಲಿನ ಲಾಭ ಮತ್ತು ನಷ್ಟದ ವಿವರಗಳೇನು ?